ಅಳವಡಿಕೆ ಇಂದಿನ ತುರ್ತು ಅಗತ್ಯವಾಗಿದೆ. ಇತ್ತೀಚೆಗೆ ಪ್ರಕಟವಾದ ಎರಡು ಕೃತಿಗಳು, ಅಕ್ಕಯ್ ಪದ್ಮಶಾಲಿಯವರ ಆತ್ಮಕಥನ 'ಅಕ್ಕಯ್' (ನಿರೂಪಣೆ: ಡಾ. ಡಾಮಿನಿಕ್ ಡಿ.) ಮತ್ತು ಮಂಜಮ್ಮ ಜೋಗತಿಯವರ ಆತ್ಮಕಥನ 'ನಡುವೆ ಸುಳಿವ ಹೆಣ್ಣು' (ನಿರೂಪಣೆ: ಅರುಣ್ ಜೋಳದ ಕೂಡ್ಲಿಗಿ) ಅರಿವು ಮತ್ತು ಜವಾಬ್ದಾರಿ ಎರಡನ್ನೂ ಮನವರಿಕೆ ಮಾಡಿಕೊಡುತ್ತವೆ.

ಈ ಎರಡೂ ಕೃತಿಗಳು ನಮ್ಮ ಕಾಲದ ಬಹುಮುಖ್ಯ ಪ್ರಕಟಣೆಗಳು ಮಾತ್ರವಲ್ಲ, ಅವು ನಮ್ಮ ಕಾಲದ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಜವಾಬ್ದಾರಿಯನ್ನು ಕುರಿತ ದಿಕ್ಸೂಚಿ ಕೃತಿಗಳೂ ಆಗಿವೆ. ಈ ಕೃತಿಗಳು ಅಲ್ಪಸಂಖ್ಯಾತ ವರ್ಗದ ಪ್ರತಿನಿಧಿಗಳು ಮಾತ್ರವಲ್ಲ, ಆ ವರ್ಗದ ಸ್ಥಿತಿ ಮತ್ತು ಗತಿಗಳ ಜವಾಬ್ದಾರಿಯು ನಮ್ಮದೂ ಆಗಬೇಕು ಎನ್ನುವ ನೈತಿಕ ಪ್ರಶ್ನೆಯನ್ನು ಭಾವ ಮತ್ತು ಬುದ್ಧಿಗಳೆರಡರ ನೆಲೆಯಲ್ಲೂ ಎತ್ತುತ್ತವೆ. ಈ ದೃಷ್ಟಿಯಿಂದ ಸಮುದಾಯದ ಎಲ್ಲ ಕ್ಷೇತ್ರದವರೂ ಓದಲೇಬೇಕು ಎನ್ನುವ ಹಕ್ಕೊತ್ತಾಯವನ್ನು ಅವು ಮಾಡುತ್ತವೆ.

ಸಾರ್ವಕಾಲಿಕವಾದ ರಾಜಕೀಯ ತಾತ್ವಿಕತೆಯೆಂದು ನಾವೆಲ್ಲರೂ ಒಪ್ಪಿರುವ, ವ್ಯಕ್ತಿಗತವಾದದ್ದು ರಾಜಕೀಯ ಸಂಗತಿಯೂ ಹೌದು ಎನ್ನುವುದರ ಹಿನ್ನೆಲೆಯಲ್ಲಿ ಈ ಪಠ್ಯಗಳನ್ನು ಓದಿದರೆ ಸಾಮುದಾಯಿಕ ಓದಿನ ಪರಿಣಾಮ ನಮಗೆ ಸಿಗುತ್ತದೆ. ವ್ಯಕ್ತಿಗಳಾಗಿ ಈ ಅಲ್ಪಸಂಖ್ಯಾತರು ಒಳಗಾಗುತ್ತಿರುವ ನೋವು ಮತ್ತು ತಲ್ಲಣಗಳು ಆಘಾತಕಾರಿಯಾಗಿವೆ. ಆದರೆ, ಅವು ಸಹಜವಾದವು ಎನ್ನುವುದು ವಿಪರ್ಯಾಸದ್ದಾದರೂ ಸತ್ಯ. ನಮ್ಮ ಮನೋವಿನ್ಯಾಸದಲ್ಲಿಯೇ ಇದಕ್ಕೆ ಜಾಗವಿಲ್ಲ ಮತ್ತು ಅಂತಹ ಪರಂಪರೆಯಲ್ಲಿಯೇ ನಾವು ಸಾಗಿ ಬಂದಿರುವುದರಿಂದ ಬೌದ್ಧಿಕವಾಗಿ ಇಂಥ ವಾಸ್ತವಗಳನ್ನು ಬಲು ಸುಲಭವಾಗಿ ಒಪ್ಪುವ ನಾವು ಭಾವನಾತ್ಮಕವಾಗಿ ಇವುಗಳನ್ನು ಸಲೀಸಾಗಿ ಒಪ್ಪಿಕೊಳ್ಳುವುದು ಕಷ್ಟ. ಅಕಾರಣವಾದ ಹಿಂಜರಿಕೆಗಳು ನಮ್ಮನ್ನು ಕಾಡುತ್ತವೆ. ಪ್ರಜ್ಞಾಪೂರ್ವಕವಾಗಿ ಇವುಗಳನ್ನು ನಾವು ಸ್ವೀಕರಿಸಲು ಪ್ರಯತ್ನಿಸುವ ಮೊದಲ ಘಟ್ಟದಲ್ಲಿ ಇವರು ಕರುಣೆಯ ಕೂಸುಗಳಾಗಿ ಬಿಡುತ್ತಾರೆ. ಈ ನಿರ್ಣಾಯಕ ಘಳಿಗೆಯನ್ನು ದಾಟಬೇಕೆಂದರೆ, ಮೊದಲು ಬದಲಾಗಬೇಕಾದದ್ದೆ ನಮ್ಮ ಭಾವಕೋಶ. ಇದಕ್ಕೊಂದು ತಯಾರಿಯೂ ಬೇಕು ಎನ್ನುವುದಾದರೆ ಈ ಪಠ್ಯಗಳು ಅದನ್ನು ಒದಗಿಸಿಕೊಡುತ್ತವೆ.

ಊಹಾತೀತ ಎನ್ನಿಸಿಬಿಡುವ ಕಡುಕಷ್ಟದ ಘಳಿಗೆಗಳನ್ನು ಇವರಿಬ್ಬರೂ ಅಸಹಾಯಕತೆ ಮತ್ತು ಧೈರ್ಯದ ವಿರುದ್ಧ ಧ್ರುವಗಳಲ್ಲಿ ಎದುರಿಸುತ್ತಾರೆ. ದೈಹಿಕವಾದ ಮತ್ತು ಮಾನಸಿಕವಾದ ಎರಡೂ ನೆಲೆಗಳಲ್ಲಿ ಇನ್ನು ಮುಂದೆ ಶಬ್ದವಿಲ್ಲ ಎನ್ನುವ ಬಗೆಯ ಹಿಂಸೆ ಮತ್ತು ತೊಳಲಾಟಗಲ್ಲಿ ಇವರು ಭವಸಾಗರವನ್ನೇ ಈಸಿ ಗೆದ್ದ ಧೀರೋದಾತ್ತರಂತೆ ಕಾಣುತ್ತಾರೆ.

ಹತ್ತನೆಯ ವಯಸ್ಸಿಗೆ ತಂದೆಯಿಂದ ಮನೆಯಿಂದ ಹೊರದೂಡಲ್ಪಟ್ಟ ಅಕ್ಕಯ್ ವಾರ ಹತ್ತು ದಿನಗಳಲ್ಲಿ ಫ್ಲೈಓವರಿನ ಅಂಡರ್‌ಪಾಸಿನಲ್ಲಿ ಕಾಣುವುದು ನರಕಾತಿ ನರಕವನ್ನು. ಯಾವೆಲ್ಲ ಬಗೆಯ ಲೈಂಗಿಕ ಆಕ್ರಮಣಗಳಿಗೆ ಈಕೆ ಒಳಗಾಗುತ್ತಾರೆ ಎನ್ನುವ ವಿವರಗಳನ್ನು ನೋಡಿದರೆ, ಇದೂ ಒಂದು ಬದುಕೇ, ಇಂಥ ಬದುಕು, ದೇವರೇ ಬೇಡವೇ ಬೇಡ ಎಂದು ಒಂದು ಘಳಿಗೆ ನಮಗೆ ಅನ್ನಿಸಿಬಿಡಬಹುದು! ಮಂಜಮ್ಮನವರ ಜೀವನದಲ್ಲಿಯೂ ಇಂಥದ್ದೇ ಅನುಭವಗಳಾಗುತ್ತವೆ. ಮೇಲೇಳಲಾರದಷ್ಟು ತೀವ್ರತೆಯ ಆಕ್ರಮಣಗಳು ಮಂಜಮ್ಮನವರ ದೇಹದ ಮೇಲಾಗುತ್ತವೆ. ಏನಿದ್ದರೂ, ಏನಾದರೂ ಹೆಣ್ಣಿನ ದೇಹವೆನ್ನುವುದು ಯಾವ ಕಾಲಕ್ಕೂ ಹಾಸುಂಡು ಬೀಸಿಒಗೆಯುವ ಬಾಳೆಲೆ! ಉದ್ದಕ್ಕೂ ಬಾಲಿದ್ಯಾತರ ಜನುಮ ಎನ್ನಿಸಿಬಿಡುವಂಥ ನಮ್ಮನ್ನು ತಳಮಳಗೊಳಿಸಿ, ನಮ್ಮ ನಿದ್ದೆಯನ್ನು, ನೆಮ್ಮದಿಯನ್ನು ಕಳೆಯುವ ನೂರಾರು ಪ್ರಸಂಗಗಳನ್ನು ಇವರಿಬ್ಬರ ಬದುಕಿನಲ್ಲಿಯೂ ನೋಡಬಹುದು. ಆದರೆ, ಹಾಗೆ ಯೋಚಿಸುವುದೇ ನಮ್ಮಂಥ ಸುರಕ್ಷಿತ ವಲಯದವರ